೧	೨	೩
೫.	ಬಿಜಾಪುರ	೮೨೪.೩೦
೬.	ಚಿಕ್ಕಮಗಳೂರು	೧೪೩೧.೭೨
೭.	ಚಿತ್ರದುರ್ಗ	೯೫೮.೩೦
೮.	ದಕ್ಷಿಣ ಕನ್ನಡ	೨೦೮೨.೬೩
೯.	ಧಾರವಾಡ	೧೨೭೩.೫೭
೧೦.	ಗುಲ್ಬರ್ಗಾ	೩೪೫.೬೪
೧೧.	ಹಾಸನ	೪೪೮.೭೧
೧೨.	ಕೊಡಗು	೧೧೩೬.೪೬
೧೩.	ಕೋಲಾರ	೮೫೭.೯೩
೧೪.	ಮಂಡ್ಯ	೧೩೭.೧೯
೧೫.	ಮೈಸೂರು	೩೮೭೫.೫೯
೧೬.	ರಾಯಚೂರು	೨೫೧.೭೪
೧೭.	ಶಿವಮೊಗ್ಗ	೧೯೪೫.೭೨
೧೮.	ತುಮಕೂರು	೭೭೫.೬೫
೧೯.	ಉತ್ತರ ಕನ್ನಡ	೭೭೨೭.೮೪
	ಒಟ್ಟು (ರಾಜ್ಯ)	೨೮೫೭೪.೧೬ ಚ.ಕಿ.ಮೀ.

ರಾಯಭಾಗ ಸಹಕಾರಿ ಸಕ್ಕರೆ ಕಾರ್ಖಾನೆ

೨೦೪ (೧೮೪) ಶ್ರೀ ಎಂ.ಜಿ. ಜರತಾರಗರ್ (ಹುಬ್ಬಳ್ಳಿ).—ಕೈಗಾರಿಕಾ ಮಂತ್ರಿಗಳು ಈ ವಿಷಯಗಳನ್ನು ದಯೆಯಿಟ್ಟು ತಿಳಿಸುವರೆ:—

ಅ) ರಾಜ್ಯದಲ್ಲಿರುವ ಸಹಕಾರಿ ಸಕ್ಕರೆ ಕಾರ್ಖಾನೆಗಳ ಸಂಖ್ಯೆ ಎಷ್ಟು, ಹಾಗೂ ಸಹಕಾರೀ ಕ್ಷೇತ್ರದಲ್ಲಿರುವ ಕಾರ್ಖಾನೆಗಳು ಎಷ್ಟು, ಇವುಗಳ ೯ ವರ್ಷಗಳಲ್ಲಿಯ ಆದಾಯ ಹಾಗೂ ಹಾನಿಗಳ ಬಗ್ಗೆ ಮಾಹಿತಿಯನ್ನು ಒದಗಿಸುವುದು;

ಆ) ಬೆಳಗಾವಿ ಜಿಲ್ಲೆಯಲ್ಲಿರುವ ರಾಯಬಾಗ ಸಹಕಾರಿ ಸಕ್ಕರೆ ಕಾರ್ಖಾನೆ ಸ್ಥಾಪಿತವಾದದ್ದು ಯಾವಾಗ, ಇದರ ಷೇರು ಬಂಡವಾಳ ಎಷ್ಟು ಹಾಗೂ ಸರಕಾರದಿಂದ ಹಾಗೂ ಇನ್ನಿತರ ಬಾಬಿನಿಂದ (ಬ್ಯಾಂಕು) ಸಹಾಯ ಪಡೆದ ಮೊತ್ತ ಎಷ್ಟು ;

ಇ) ಮೇಲ್ಕಂಡ ಕಾರ್ಖಾನೆ ಸ್ಥಾಪನೆಯಿಂದಾ ಇಲ್ಲಿಯವರೆಗೆ ಆದ ಲಾಭ ಹಾನಿಯ ವಿವರ ಗಳನ್ನು ತಿಳಿಸುವುದು;

ಈ) ಮೇಲ್ಕಂಡ ರಾಯಬಾಗ ಸಹಕಾರಿ ಸಕ್ಕರೆ ಕಾರ್ಖಾನೆಗೆ ಒಟ್ಟು ೬ ಕೋಟಿ ರೂಪಾಯಿ ನಷ್ಟ ಸಂಭವಿಸಿದ್ದು ನಿಜವೆ;

ಉ) ಹಾಗಿದ್ದರೆ ಯಾವ ಯಾವ ವರ್ಷದಲ್ಲಿ ಹಾಗೂ ಯಾವ ಯಾವ ಬಾಬಿನಿಂದ (ಇಲಾಖೆ) ಎಷ್ಟು ನಷ್ಟ ಸಂಬಂಧಿಸಿದೆ?

ಊ) ಈ ನಷ್ಟ ಸಂಭವಿಸುವುದಕ್ಕೆ ಕಾರಣರಾರು ತಪಶೀಲವಾರು ಮಾಹಿತಿ ಒದಗಿಸುವುದು ?